# ನಮ್ಮಂತೆ ನಾವಿರೋಣ

ಡಾ. ಕೆ.ವೈ. ಬಾಲರಾಜ್

> ಬದುಕು ಒಂದು ಕಲೆ.
> ಈ ಪ್ರಪಂಚದ ವಿರೋಧಾಭಾಸಗಳ ನಡುವೆ ಬದುಕುವ ಕಲೆಯನ್ನು ಕಲಿತರೆ ಆಗ ನಮ್ಮ ಬದುಕೇ ಒಂದು ಸುಂದರ ಕಲಾಕೃತಿಯಾಗುತ್ತದೆ. ಈ ಕಲೆಯನ್ನು ಕುರಿತು ವಿವೇಚನೆ ನಡೆಸಿದ್ದಾರೆ ತತ್ತ್ವಶಾಸ್ತ್ರದ ವಿದ್ಯಾರ್ಥಿಯಾದ ಶ್ರೀ ಬಾಲರಾಜ್ ಅವರು.

ಜೀವನದ ಪ್ರಾಮಾಣಿಕ ಪ್ರಯತ್ನದಲ್ಲೂ ಕೂಡ ನಾವು ಹೆಜ್ಜೆ ಹೆಜ್ಜೆಗೂ ಸೋಲುತ್ತಿರಬಹುದು. ಅದಕ್ಕಾಗಿ ನಿರಾಶರಾಗಬೇಕಾದ ಕಾರಣವಿಲ್ಲ. ಬದುಕಿನಲ್ಲಿ ಕೊನೆಯ ಆನಂದವೆಂದರೆ ಆತ್ಮಸಂತೋಷ ಒಂದು ಪ್ರತಿಭೆ, ಒಂದು ಯೋಗ್ಯತೆಯಿದ್ದು ಅದಕ್ಕೆ ಸರಿಯಾದ ಪುರಸ್ಕಾರ, ಮಾನ್ಯತೆ ದೊರೆಯದಿದ್ದಾಗ ನಾವು ನಮ್ಮ ಮನಸ್ಸನ್ನು ಬೇಸರಕ್ಕೋ, ನಿರಾಶಾವಾದಕ್ಕೋ ತಳ್ಳಬಾರದು. ನೂರು ರೂಪಾಯಿ ಸಂಪಾದಿಸುವ ಜಾಗದಲ್ಲಿ ಹತ್ತೇ ರೂಪಾಯಿ ಗಳಿಸಿಕೊಂಡರೂ ಆತ್ಮತೃಪ್ತಿಯು ಖಂಡಿತವಾಗಿಯೂ ಇರುತ್ತದೆ.ನಮ್ಮನ್ನು ಇನ್ನೊಬ್ಬರ ಸಂಪಾದನೆಗೆ ಹೋಲಿಸಿಕೊಂಡು ಕೊರಗಬಾರದು.

ಬದುಕಿನ ಏಳು ಬೀಳುಗಳೇ ಹಾಗೆ. ಹಾಗಂತ ಅವನು ಅದೃಷ್ಟವಂತ, ನಾನು ದುರದೃಷ್ಟವಂತ ಎಂದರ್ಥವಲ್ಲ. ನಮ್ಮಲ್ಲಿರುವ ಆತ್ಮತೃಪ್ತಿ ಸಮಾಧಾನ, ಶಾಂತಿ ಕೊಡುವಂತೆಯೂ ಇರಬೇಕು. ಜೀವನದಲ್ಲಿ ಒಂದು ಗುರಿ, ಪ್ರತಿಭೆ, ಅಧ್ಯಯನ, ಆದರ್ಶ ಇರುವುದು ಖಂಡಿತವಾಗಿಯೂ ತಪ್ಪಲ್ಲ. ಆದರೆ ಅದಕ್ಕೆ ಸರಿಯಾದ ಮನ್ನಣೆಯೋ ಅಥವಾ ಅವಕಾಶವೋ ದೊರೆಯಲಿಲ್ಲವೆಂದು ಕೊರಗುವುದಕ್ಕಿಂತ ನಮ್ಮಲ್ಲಿರುವ ಪ್ರತಿಭೆ, ಕುಶಲತೆಯನ್ನು ಇನ್ನೊಂದು ರೀತಿಯಲ್ಲಿ ಬೆಳೆಸುವ ಮಾರ್ಗವನ್ನು ನಾವು ಕಂಡುಕೊಳ್ಳಬೇಕು. ಬೇರೆಯವರ ವ್ಯಂಗ್ಯಭರಿತ ಸಹಾನುಭೂತಿಯ ಮಾತುಗಳು ನಮ್ಮೆಡೆಗೆ ಹರಿದುಬರುತ್ತವೆ. ಒಂದೊಂದು ಸಲ ಅವು ನಮ್ಮನ್ನು ಜೀವನದಿಂದಲೇ ವಿಚಲಿತಗೊಳಿಸುತ್ತವೆ. ನಾವು ನಮ್ಮ ಮೆದುಳಿನ ಶಕ್ತಿಯನ್ನು ಅಂತಹ ಕ್ಷುಲ್ಲಕ ಯೋಚನೆಗಳಿಗಾಗಿ ಬಳಸಿಕೊಳ್ಳಬಾರದು. ಪ್ರಪಂಚದ ರೀತಿನೀತಿಗಳೇ ಹಾಗೆ. ಅವು ಏಕೆ ಹಾಗೆ? ಎಂದು ಪ್ರಶ್ನೆ ಮಾಡಿದರೂ ಸಮರ್ಪಕವಾದ, ಸಮಾಧಾನಕರವಾದ ಉತ್ತರಗಳು ಸಿಗುವಂತಹ ವಾತಾವರಣವಿಲ್ಲ. ಅದಕ್ಕಾಗಿಯೇ ಇಂತಹ ತೊಂದರೆಗಳನ್ನು, ಅಡೆತಡೆಗಳನ್ನು ನಾವು ಒಪ್ಪಿಕೊಂಡು ಬಾಳುವುದನ್ನು ಕಲಿಯಬೇಕು.

> **ಪ್ರಯತ್ನಿಸದವನು ಮಾತ್ರ ವಿಫಲತೆಯಿಂದ ಮುಕ್ತನಾಗುತ್ತಾನೆ.**
>
> **— ರಿಚರ್ಡ್ ವ್ಹಾಟ್ಲೀ**
>
> (Richard Whately)

ಇದರಲ್ಲಿ ನಮ್ಮ ಮನಸ್ಥೈರ್ಯದ ಪಾತ್ರವು ಬಹಳ ಮುಖ್ಯವಾಗಿರುತ್ತದೆ. ನಮ್ಮ ಪ್ರಯತ್ನದ ಅಪಜಯವೇ ನಮ್ಮ ಬದುಕಿನ ಭರವಸೆಯ ಆಶಾಕಿರಣವಾಗಬೇಕು. ಯಾರೂ ಹುಟ್ಟಿನಿಂದಲೇ ಸೋಲನ್ನು ಪಡೆದಿರುವುದಿಲ್ಲ, ಆದರೆ ಕೆಲವು ವಸ್ತು-ವಿಷಯಗಳಿಂದ ವಂಚಿತರಾಗಿರುತ್ತಾರೆ. ಸಮಯ-ಸಂದರ್ಭಗಳು, ಬಡತನ ಅಥವಾ ಕೆಲವರ ಕುಟಿಲತನದಿಂದ ನಮಗೆ ಸಿಗುವುದು ಸಿಗದೇ ಇರಬಹುದು. ಆದರೆ ಇದು ಖಂಡಿತವಾಗಿಯೂ ಸೋಲಲ್ಲ.

ಈ ಜಗತ್ತಿನ ಸೃಷ್ಟಿ ಜೀವಿಗಳಾದ ನಾವು ಯಾವುದೋ ಒಂದು ವಿಶೇಷ ವಿದ್ಯೆ, ಕಲಿಕೆ, ಪ್ರತಿಭೆ, ಕಲಾನೈಪುಣ್ಯ—ಇವುಗಳನ್ನು ನಮಗರಿವಿಲ್ಲದಂತೆಯೇ ಪಡೆದಿರುತ್ತೇವೆ, ಅಥವಾ ಪ್ರಯತ್ನಪೂರ್ವಕವಾಗಿ ಸಾಧಿಸಿ ಪಡೆದಿರುತ್ತೇವೆ. ಆ ವಿಷಯದ ಬಗ್ಗೆ, ಸಾಧನೆಯ ಬಗ್ಗೆ ನಮಗೆ ಹೆಮ್ಮೆ ಇರಬೇಕು. ನಾವು ಪಟ್ಟ ಪರಿಶ್ರಮ, ಕಷ್ಟನಷ್ಟಗಳು ಇತರರಿಗೆ ಅರ್ಥವಾಗುವುದಿಲ್ಲ. ನಮ್ಮ ಪ್ರತಿಭೆ, ಪರಿಶ್ರಮಗಳು ಇಂದಿನ ಆಧುನಿಕ ಕಾಲಕ್ಕೆ ಸರಿಯಿಲ್ಲ, ಉಪಯೋಗವಿಲ್ಲ, ಅದೊಂದು ವ್ಯರ್ಥ ಪ್ರಯತ್ನವೆಂದು ಆಡಿಕೊಳ್ಳುತ್ತಿರುತ್ತಾರೆ. ಆದರೆ ನಾವು ಇಂತಹವುಗಳಿಗೆ ಗಮನ ಕೊಡಬಾರದು. ಅದು ನಿಜವಾಗಿಯೂ ಮೂರ್ಖರ ಪ್ರಲಾಪಗಳು ಅಷ್ಟೆ. ಯಾರೋ ಒಬ್ಬ ತಿಳಿಯದ ವ್ಯಕ್ತಿ ನನ್ನ ಬಗ್ಗೆ ಮಾತನಾಡುತ್ತಾನೆ ಎಂದರೆ ನನ್ನ ಬಗ್ಗೆ ನಾನು ಕೀಳರಿಮೆ ಬೆಳೆಸಿಕೊಂಡರೆ ಅದು ನನ್ನದೇ ತಪ್ಪಾಗುತ್ತದೆ. ನಾವು ಇದುವರೆಗೂ ಸಾಧಿಸಿ ಬೆಳೆಸಿಕೊಂಡ ವ್ಯಕ್ತಿತ್ವವನ್ನು ಸದಾ ಕಾಪಾಡಿಕೊಳ್ಳಬೇಕು. ಅವರಿವರು ಕೊಡುವ ಬಾಯಿಮಾತಿನ ಉಪದೇಶಗಳ ಪ್ರಮಾಣಪತ್ರಗಳನ್ನು, ಪ್ರಶಸ್ತಿ ಪತ್ರಗಳನ್ನು ನಮ್ಮ ಕುತ್ತಿಗೆಯಲ್ಲಿ ತೂಗಿಸಿಕೊಂಡು ಓಡಾಡಬೇಕಿಲ್ಲ. ನಮ್ಮ ಬಗ್ಗೆ ನಮಗೆ ಮೊದಲು ನಂಬಿಕೆ ವಿಶ್ವಾಸಗಳಿರಬೇಕು. ಒಂದು ಸಲ ಸೋಲಿನಿಂದ ಜಾರಿದವೆಂದಾಕ್ಷಣ ಜೀವನದಲ್ಲಿ ನಾವು ಮುಂದುವರಿಯುವುದಿಲ್ಲವೆಂದೋ ಅಥವಾ ಯಶಸ್ವಿಯಾಗುವುದಿಲ್ಲವೆಂದೋ ಭಾವಿಸಬಾರದು. ನೀವು ಅಸಮರ್ಥರು, ಬದುಕುವ ದಾರಿ ತಿಳಿದಿಲ್ಲ, ನಿಮ್ಮಲ್ಲಿರುವುದು ಉಪಯೋಗವಿಲ್ಲದ ವಿದ್ಯೆ, ನಿಮ್ಮ ಪ್ರತಿಭೆ ಕಾಡಿನ ಬೆಳದಿಂಗಳು ಎಂದು ಸದಾ ಟೀಕಿಸುತ್ತಲೇ ಇರುವ ಜನಗಳ ಮಾತಿಗೆ ನಾವು ಕಿವಿಗೊಡಬಾರದು. ಇನ್ನೊಬ್ಬರ ಹೇಳಿಕೆ, ನಿರ್ಧಾರಗಳ ಮೇಲೆ ನಮ್ಮ ಬದುಕು ನಿಂತಿಲ್ಲ. ಯಾವುದು ಸರಿ, ಯಾವುದು ತಪ್ಪು ಎಂದು ನಿರ್ಧರಿಸುವವರು ನಾವಾಗಬೇಕು. ನಮ್ಮ ಸಾಮರ್ಥ್ಯ ನಮಗಿರುತ್ತದೆ. ನಾವು ಮಾಡಬಹುದಾದ ಕೆಲಸದ ಬಗ್ಗೆ ಶ್ರದ್ಧೆ, ಗಮನ, ಪ್ರಯತ್ನವಿದ್ದರೆ ಅದು ತನಗೆ ತಾನೇ ಒಂದು ಹೊಸ ಬಾಳಿನ ಲೋಕಕ್ಕೆ ನಮ್ಮನ್ನು ಕೊಂಡೊಯ್ಯುತ್ತದೆ ಎಂಬುದನ್ನು ಮರೆಯಲಾಗದು.

ಬುದ್ಧಿಮಾತುಗಳನ್ನು ಹೇಳುವ, ಜೀವನದ ಬಗ್ಗೆ ಉಪದೇಶಗಳನ್ನು ಕೊರೆಯುವ ಯಾವ ಮಂದಿಯಿಂದಲೂ ನಮಗೆ ಕಿಂಚಿತ್ತೂ ಸಹಾಯವಾಗುವುದಿಲ್ಲ ಎಂದು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು.

ನಮಗಾಗಿ ನಾವು ಬಾಳುವುದನ್ನು ಕಲಿಯಬೇಕು. ಪರರನ್ನು ಮೆಚ್ಚಿಸಿ ಬಾಳಲು ಹೊರಟರೆ ಅವರು ಇಲ್ಲದ ತಪ್ಪುಗಳ ಸರಮಾಲೆಯನ್ನೇ ನಮ್ಮ ಕೊರಳಿಗೆ ಹಾಕಿ ಸಂತೋಷಪಡುತ್ತಾರೆ. ಅಂತಹ ಮೂರ್ಖರ ದಾರಿ ತಪ್ಪಿಸುವ ಯೋಜನೆಗಳಿಗೆ ನಾವು ಬಲಿಪಶುಗಳಾಗಬಾರದು. ಇದರೊಂದಿಗೆ ನಮ್ಮ ಬಾಳಲ್ಲಿ ಇತರರ ಸಹಾನುಭೂತಿಯನ್ನು ನಿರೀಕ್ಷಿಸುವುದರಲ್ಲಿ ಸಮಯವನ್ನು ಹಾಳು ಮಾಡಿಕೊಳ್ಳಬಾರದು. ನಮ್ಮ ಕರ್ತವ್ಯ, ಪ್ರಯತ್ನಗಳ ಫಲದಲ್ಲಿ ನಾವು ಮುಂದುವರೆಯ ಬೇಕು.

**ಆತ್ಮನು ಸ್ವರ್ಗೀಯ ವಸ್ತುಗಳನ್ನು ಚಿತ್ರಿಸುವ ಲೇಖನಿಯೇ ಶ್ರದ್ಧೆ.**

*ಟಿ.ಬರ್‌ಬ್ರಿಡ್ಜ್* (T.Burbridge)

ಈ ಪ್ರಪಂಚದಲ್ಲಿ ಬಾಳಬೇಕಾದರೆ ಎಲ್ಲವನ್ನೂ ತಿಳಿದಿರಲೇ ಬೇಕು ಎಂದಿಲ್ಲ. ಸ್ವಲ್ಪ ನೋಡಿ ತಿಳುವಳಿಕೆ ತಂದುಕೊಂಡರೂ ಸಾಕು, ನಾವು ಹೇಗೆ ಇರಬೇಕೆಂದು ನಮಗೇ ಅರ್ಥ ವಾಗುತ್ತದೆ. ಮೊದಲು ನಮ್ಮ ಇತಿ-ಮಿತಿಗಳು, ದೌರ್ಬಲ್ಯಗಳನ್ನು ನಾವು ತಿಳಿದು ಕೊಂಡರೆ ನಂತರ ಉಳಿದವರೊಂದಿಗೆ ಹೇಗೆ ಅನುಸರಿಸಿಕೊಂಡು ಸಹಯೋಗದಿಂದ ಇರಬಹುದು ಎಂದು ತಿಳಿಯುತ್ತದೆ.

ನಮ್ಮ ಬಗ್ಗೆ ನಾವು ಅನುಮಾನ ಪಟ್ಟುಕೊಳ್ಳಲು ಹೋಗ ಬಾರದು. ಈ ಪ್ರಪಂಚದಲ್ಲಿ ನಮಗೆ ಎಷ್ಟು ಮುಖಗಳು ಕಾಣುತ್ತವೋ ಅಷ್ಟು ರೀತಿಯ ಸಮಸ್ಯೆಗಳು ಖಂಡಿತವಾಗಿಯೂ ಇವೆ. ಪ್ರತಿಯೊಬ್ಬನು ತನಗೆ ಮಾತ್ರ ಸಮಸ್ಯೆಗಳಿವೆ ಬೇರೆಯವರು ನಿಶ್ಚಿಂತರಾಗಿದ್ದಾರೆ ಎಂದುಕೊಂಡೋ ಅಥವಾ ಅವರ ಸಮಸ್ಯೆಗಳು ಸಮಸ್ಯೆಗಳೇ ಅಲ್ಲವೆನ್ನುವಂತೆ ಕಲ್ಪಿಸಿಕೊಂಡೊ ಸಂಕಟಪಡುತ್ತಿರುತ್ತಾನೆ. ತನಗಿರುವ ನೋವಿಗಿಂತಲೂ ಬೇರೆಯವರ ನಿಶ್ಚಿಂತೆಗಳೇ ಅವನಿಗೆ ಇನ್ನೂ ಹೆಚ್ಚಿನ ನೋವನ್ನುಂಟುಮಾಡುತ್ತವೆ.ಮಾನಸಿಕ ಗೊಂದಲ ಸ್ಥಿತಿಯಲ್ಲಿ ಏನೂ ತಿಳಿಯದೆ ಒದ್ದಾಡುತ್ತಾನೆ.

**ತನಗಿರುವ ನೋವಿಗಿಂತಲೂ ಬೇರೆಯವರ ನಿಶ್ಚಿಂತೆಗಳೇ ವ್ಯಕ್ತಿಗೆ ಇನ್ನೂ ಹೆಚ್ಚಿನ ನೋವನ್ನುಂಟುಮಾಡುತ್ತವೆ.**

ಜೀವನವನ್ನೇ ಗೊಂದಲಮಯ ಮಾಡಿಕೊಳ್ಳುತ್ತಾನೆ. ಚಿಂತೆಯಿಂದ ಯಾರೂ ನಮ್ಮನ್ನು ಮುಕ್ತರನ್ನಾಗಿಸುವುದಿಲ್ಲ. ಪುನಃ ಇನ್ನಷ್ಟು ಚಿಂತೆ ಹತ್ತಿಸುವುದೇ ಈ ಜಗದ ಲಕ್ಷಣ. ಈ ವಿಚಿತ್ರ ಪ್ರಪಂಚವನ್ನು ಪ್ರತಿಭಟಿಸಲೋ, ಸುಧಾರಿಸಲೋ ಹೋಗಬಾರದು. ಹೃದಯವನ್ನು ವಿಶಾಲ ಮಾಡಿಕೊಂಡು ಒಳಿತು-ಕೆಡಕು, ಶುಭ-ಅಶುಭಗಳ ಎಲ್ಲ ರೂಪಗಳನ್ನು ನಗುಮುಖದಿಂದಲೇ ಸ್ವೀಕರಿಸೋಣ. ಆದರೆ ನಾವು ನಮ್ಮಂತೆಯೇ ಇರುವುದನ್ನು ಕಲಿಯೋಣ. ಇದೆ ನಮ್ಮ ಬದುಕಿನ ಒಳಗುಟ್ಟು ಅಲ್ಲವೇ!

## ಧೀರಾತ್ಮನಿಗೆ

ಸೂರ್ಯನು ಮುಗಿಲಲಿ ಮರೆಯಾಗಿದ್ದರು,
ಕಾಳಿಮೆಯಲಿ ಬಾನ್ ಮುಳುಗಿದರು,
ಹತಾಶೆಗೊಳದಿರು, ಓ ಧೀರಾತ್ಮನೆ,
ಜಯವದು ನಿಶ್ಚಿತ, ನಿಶ್ಚಿತವು!

ಶಿಶಿರದ ಬೆನ್ನೆಡೆ ವಸಂತ ಬರುವುದು,
ಇಳಿದರು ಅಲೆ ಮೇಲೇಳುವುದು;
ನೆರಳ ನಡುವಿನಿಂ ಬೆಳಕು ನುಗ್ಗುವುದು
—ಸ್ಥಿರವಾಗಿರು, ಓ ಧೀರಾತ್ಮ!

ಬಾಳ ಹೊಣೆಗಳವು ಬೇವಾಗುವವು,
ಸಂತಸ ಕ್ಷಣದಲಿ ಮುಗಿಯುವುದು;
ಗುರಿಯನು ನೆರಳದು ನುಂಗುವುದು
—ಕತ್ತಲ ಸೀಳುತ ನಡೆ, ಧೀರಾತ್ಮನೆ,
ಸಂತತ ಸಾವಿರ ಯತ್ನದಲಿ!

ಇಟ್ಟ ಅಡಿಗಳು, ಪಟ್ಟ ಪಾಡುಗಳು
ವ್ಯರ್ಥವಲ್ಲವೆಂದೆಂದಿಗೂ;
ಕನಸು ಕರಗಿದರು, ಶಕ್ತಿಗುಂದಿದರು
ನಿನ್ನುದ್ಧಾರಕನುದಿಸುವನು!
—ತಡೆ, ತಡೆದಿರು ನೀ, ಓ ಧೀರಾತ್ಮನೆ,
ಒಳಿತೆಂದಿಗು ಅಳಿಯುವುದಿಲ್ಲ!

ತಿಳಿದು ಬಾಳುವರು ಕೆಲವರಾದರೂ
ಅವರೆ ಬಾಳ್ಗೆ ಬೆಳಕೀಯುವರು;
ಮಂದಿ ನಿಜದ ಬೆಲೆಯರಿವುದೆಂದಿಗೋ,
ಕಿವುಡನೆನಿಸವರ ನುಡಿಗಳಿಗೆ!

ದೂರದರ್ಶಿಗಳು ನೆರವಿಗೆ ನಿಲುವರು,
ಸರ್ವಶಕ್ತ ನಿನ್ನೊಡನಿಹನು;
ಹರಕೆಯದೆಲ್ಲವು ಹರಿದು ಬರಲಿ, ನೀ
ನಡೆ, ಧೀರಾತ್ಮನೆ, ಗುರಿಯೆಡೆಗೆ!

ರಚನೆ : ಸ್ವಾಮಿ ವಿವೇಕಾನಂದ ಅನುವಾದ :ಹೆಚ್.ಎನ್. ಮುರಳೀಧರ